INDIAN JOURNAL OF HISTORY AND ARCHAEOLOGY
ISSN (e):2582-225X
Vol-3, Issue -3, September-October, 2021,
PageNo,10-17
Peer Reviewed Journal, Referred Journal

# ಪ್ರಾಚೀನ ಕಾಲದಲ್ಲಿ ಸ್ತ್ರೀ ಶಿಕ್ಷಣದ–ಹಾದಿಗಳು

**ಡಾ.ಕೆ.ಪ್ರಭು**[1]

ಒಬ್ಬ ವ್ಯಕ್ತಿಯು ಸಮಾಜದಲ್ಲಿ ಒಬ್ಬ ಉತ್ತಮ ನಾಗರೀಕನಾಗಿ ಬೆಳೆಯಲು ಆತನ ಸಮಾಜ ಜೀವನಕ್ಕೆ ನೆರವಾಗಬಲ್ಲ ಸಾಮಾರ್ಥ್ಯ, ಕೌಶಲ, ಮನೋಭಾವ ಮತ್ತು ಇತರ ವರ್ತನೆಗಳನ್ನು ರೂಢಿಸಿಕೊಳ್ಳಲು ನೆರವಾಗುವ ಒಂದು ಪರಿಣಾಮಕಾರಿ ಮಾಧ್ಯಮವೇ ಶಿಕ್ಷಣ. ಕುಟುಂಬಕ್ಕೆ ಸಂಸ್ಕೃತಿ ನೀಡಿ ಕುಟುಂಬವನ್ನು ಉನ್ನತಿಗೆ ಕೊಂಡೊಯ್ಯುವಲ್ಲಿ ಗೃಹಿಣಿಯಾದವಳ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಕುಟುಂಬ ನಿರ್ವಹಿಸಬೇಕಾದ ಕಾರ್ಯಗಳನ್ನೆಲ್ಲ ನಿರ್ವಹಿಸಿ, ಮಗುವಿನ ಪಾಲನೆ, ಪೋಷಣೆ ಹಾಗೂ ಬೆಳವಣಿಗೆಯ ಸಂಪೂರ್ಣವಾದಂಥ ಜವಾಬ್ದಾರಿಯನ್ನು ಹೊತ್ತು ಅದನ್ನು ನಿಭಾಯಿಸಬಲ್ಲವಳೆಂದರೆ ಗೃಹಣಿ. ಕ್ರಿಯಾಶೀಲ ಸುಶಿಕ್ಷಿತ ಬುದ್ಧಿವಂತ ಸ್ತ್ರೀ ಮಾತ್ರ ಈ ಹೊಣೆಯನ್ನು ಸಮರ್ಥವಾಗಿ ನಿಭಾಯಿಸಬಲ್ಲಳು.

ಪ್ರಾಚೀನ ಭಾರತದಲ್ಲಿ ಸ್ತ್ರೀಯರ ಸಾಮಾನ್ಯ ಸ್ಥಾನವೂ ಅನನ್ಯವಾಗಿಯೇ ಇತ್ತು ಎಂದು ಹೇಳಬಹುದು. ಅವರು ಸಮಾಜದಲ್ಲಿ ಉನ್ನತ ಸ್ಥಾನಮಾನ ಮತ್ತು ಸ್ವಾತಂತ್ರ್ಯವನ್ನು ಅನುಭವಿಸಿದರು. ಅವಿವಾಹಿತ ಯುವ ಕಲಿತ ಮಗಳನ್ನು ಕಲಿತ ವರನೊಂದಿಗೆ ಮದುವೆಯನ್ನು ಮಾಡಿತ್ತಿದ್ದರು. ಆ ದಿನಗಳಲ್ಲಿ ಆರಂಭಿಕ ವಿವಾಹವು ರೂಢಿಯಲ್ಲಿರಲ್ಲಿಲ್ಲ. ಹುಡುಗಿಯರು ಕೂಡ ತಮ್ಮ ತಮ್ಮ ಸಂಗಾತಿಗಳನ್ನು ಮುಕ್ತವಾಗಿ ಆಯ್ಕೆ ಮಾಡಬಹುದಿತ್ತು. ಶಿಶು ವಿಹಾರ ಮತ್ತು ಬಲವಂತದ ವಿಧವೆ ಪದ್ಧತಿಗಳು ವೈದಿಕ ಭಾರತದಲ್ಲಿ ಪ್ರಚಲಿತದಲ್ಲಿರಲಿಲ್ಲ.

ಭಾರತ ವರ್ಷ ಯಾವತ್ತೂ ಸ್ತ್ರೀಶಕ್ತಿಯ ಉಪಾಸಕವಾಗಿದೆ. ಯತ್ರ ನಾರ್ಯಸ್ತು ಪೂಜ್ಯಂತೇ ರಮಂತೇ ತತ್ರ ದೇವತಾ: ಎಂಬಂತೆ ಭಾರತೀಯರಲ್ಲಿ ಸ್ತ್ರೀಗೆ ಶ್ರೇಷ್ಠ ಸ್ಥಾನಮಾನವಿದೆ. ಏಕೆಂದರೆ, ಇದು ಕೇವಲ ಸ್ತ್ರೀ ಕುಲದ ಕುರಿತು ಸದ್ಭಾವನೆಯ ಪ್ರಶಂಸೆಯಾಗಿರದೇ ವ್ಯಾವಹಾರಿಕವಾಗಿಯೂ ಭಾರತೀಯ ಗೃಹಸ್ಥ ಜೀವನದಲ್ಲಿಯೂ ಈ ಮಾತು ಸಾರ್ಥಕತೆ ಪಡೆದಿದೆ. ಆದ್ದರಿಂದ ಒಂದು ಸಮಾಜದ ನಾಗರಿಕತೆ, ಸಂಸ್ಕೃತಿ ಮತ್ತು ಪ್ರಗತಿಯ ಮಟ್ಟವನ್ನು ಅಳೆಯುವಲ್ಲಿ ಶಿಕ್ಷಣ ಮಹತ್ವದ ಪಾತ್ರವನ್ನು

1. **ಸಹ ಪ್ರಾಧ್ಯಾಪಕರು, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ, ಮಾನಸ ಗಂಗೋತ್ರಿ, ಮೈಸೂರು**

ವಹಿಸುತ್ತದೆ. ಅದರಲ್ಲೂ ಸ್ತ್ರೀ ಶಿಕ್ಷಣ ಅತ್ಯಂತ ಪ್ರಮುಖ ಅಳತೆಗೋಲಾಗಿರುತ್ತದೆ. ಪ್ರಾಚೀನ ಕಾಲದಲ್ಲಿ ಭಾರತದಲ್ಲಿ ಸ್ತ್ರೀ ಸ್ವಾತಂತ್ರ್ಯ, ಸಮಾನತೆ, ಶಿಕ್ಷಣದ ವಿಷಯದಲ್ಲಿ ಪುರುಷರಿಗೆ ಸರಿಸಮಾನವಾಗಿ ಅವಕಾಶಗಳಿರಲಿಲ್ಲ. ವೇದಕಾಲದಲ್ಲಿ ಸ್ತ್ರೀಯರಿಗೆ ಉನ್ನತ ಸ್ಥಾನಮಾನವಿದ್ದರೂ ಅನಂತರದಲ್ಲಿ ಆರ್ಷ ಮಹಾಕಾವ್ಯ, ಸ್ಮೃತಿ ಕಾಲಗಳಲ್ಲಿ ಸ್ತ್ರೀ ಸ್ವಾತಂತ್ರ್ಯ, ಶಿಕ್ಷಣಗಳಿಗೆ ಧಕ್ಕೆಯುಂಟಾಗಿ ಸ್ತ್ರೀ ಮೂಲೆಗುಂಪಾದಳು ಎಂಬ ಭಾವನೆಯಿದೆ. ಈ ವಿಚಾರವಾಗಿ ಇಂದು ಮಾತ್ರವಲ್ಲ ಹಿಂದೆ ಪ್ರಾಚೀನ ಕಾಲದಲ್ಲಿಯೂ ಋಷಿಮುನಿಗಳು ವೇದೋಪನಿಷತ್ತುಗಳು, ಧರ್ಮಶಾಸ್ತ್ರಗಳಲ್ಲಿ ವೈವಿಧ್ಯಮಯವಾಗಿ ಎಲ್ಲ ದೃಷ್ಟಿಕೋನಗಳಿಂದಲೂ ವಿಚಾರ ವಿಮರ್ಶೆ ಮಾಡಿರುವುದು ಕಂಡುಬರುತ್ತದೆ.

ಯಜ್ಞ, ದಾನ, ತಪಸ್ಸುಗಳ ಮೂಲಕ ಜಗತ್ತಿನ ವಿಶಿಷ್ಟತೆಗೆ ಕಾರಣರಾದ ಇಂಥ ತಪಸ್ವಿಗಳು ತಮ್ಮ ಜ್ಞಾನದಿಂದ ಕಂಡುಕೊಂಡ ಸತ್ಯವನ್ನು ಕಲೆತು, ಕುಳಿತು, ಚರ್ಚಿಸಿ, ಚಿಂತಿಸಿ ಒಮ್ಮತಕ್ಕೆ ಬಂದಂತಹ ಅಭಿಪ್ರಾಯಗಳಿಂದ ರೂಪಗೊಂಡ ನಮ್ಮ ಉದಾತ್ತ ಸಂಸ್ಕೃತಿಗೆ ಸ್ತ್ರೀಕುಲದ ಸಾಧನೆಯೂ ಒಂದು ಮೂಲಾಧಾರವಾಗಿದೆ. ಸ್ತ್ರೀಗೆ ಈ ಸತ್ವದೊರಕಿದ್ದು, ಆಕೆ ಅರಗಿಸಿಕೊಂಡ ತತ್ವಗಳಿಂದ ಎಂಬುದು ಸತ್ಯ ಮತ್ತು ಉಲ್ಲೇಖನೀಯ. ಈ ತತ್ವಗಳನ್ನು ಅಳವಡಿಸಿಕೊಂಡ ಸ್ತ್ರೀಯು ಪುರುಷನಂತೆ ಸಮಾಜದಲ್ಲಿ ಗೌರವಾದರಗಳಿಗೆ ಪಾತ್ರಳಾಗಿದ್ದಳು ಎಂಬುದು ಪ್ರಾಚೀನ ಕಾಲದ ಇತಿಹಾಸದಿಂದ ತಿಳಿದುಬರುತ್ತದೆ. ವೇದಕಾಲದಲ್ಲಿ ಸ್ತ್ರೀಯರಿಗೆ ಪುರುಷರಿಗೆ ಸಮನಾಗಿಯೇ ಶಿಕ್ಷಣವು ದೊರೆಯುತ್ತಿತ್ತು ಎಂಬುದಕ್ಕೆ ಸಾಕಷ್ಟು ಆಧಾರಗಳು ಇವೆ. ಹಲವು ಹತ್ತು ಜನ ಸ್ತ್ರೀಯರು ವೇದಗಳ ಮಂತ್ರಗಳನ್ನು ರಚಿಸಿದ್ದಾರೆ.

ಪ್ರಾಚೀನ ಭಾರತದಲ್ಲಿ ಸ್ತ್ರೀಯರಿಗೆ ಶಿಕ್ಷಣವು ಉಚಿತ ಪ್ರವೇಶವಿತ್ತು. ಅವರು ವೈದಿಕ ತ್ಯಾಗ ಮತ್ತು ಮಂತ್ರಗಳನ್ನು ಉಚ್ಚರಿಸುವ ನಿರೀಕ್ಷೆಯಿತ್ತು. ಋಗ್ವೇದದ ಕೆಲವು ಸ್ತೋತ್ರಗಳನ್ನು ಕೂಡ ಈ ಕವಿಯತ್ರಿಯರು ರಚಿಸಿದ್ದಾರೆ. ವಿಶ್ವವಾರ, ಲೋಪಮುದ್ರ, ಅಪಾಲ, ಊರ್ವಸಿ, ಘೋಸ, ಸುಲಭ, ಲೀಲಾವತಿ, ಮೈತ್ರೇಯಿ, ಸಾಶ್ವತಿ, ಕಷ್ಟ, ಗಾರ್ಗಿ ಮತ್ತು ಇತರ ವಿದ್ವಾಂಸರ ಉಲ್ಲೇಖಗಳನ್ನು ಗುರುತಿಸಬಹುದು. ಹಾಗೆಯೇ, ಪುರಾತನ ಭಾರತದ ಅತ್ಯಂತ ಕಲಿತ ತತ್ತ್ವಜ್ಞಾನಿ ಯಾಜ್ಞವಲ್ಕನ ಪ್ರಸಿದ್ಧ ಪತ್ನಿ ಮೈತ್ರೇಯಿ. ಈ ಮೈತ್ರೇಯಿಯೂ ತನ್ನ ಪತಿಯೊಂದಿಗೆ ತತ್ತ್ವಶಾಸ್ತ್ರದ ಪ್ರಶ್ನೆಗಳನ್ನು ರಚಿಸಿ ಚರ್ಚಿಸುತ್ತಿದ್ದಳು ಎಂಬುದಕ್ಕೆ ಚರಿತ್ರೆಯಲ್ಲಿ ದಾಖಲೆಗಳು ದೊರಕುತ್ತವೆ ಎಂದು ಹೇಳಬಹುದು. ಹಾಗೆಯೇ, ತಾತ್ವಿಕ ವಿಷಯಗಳನ್ನು ಕುರಿತಂತೆ ಯಾಜ್ಞವಲ್ಕನೊಂದಿಗೆ ಚರ್ಚೆಯಲ್ಲಿ ಗಾರ್ಗಿ ಭಾಗವಹಿಸಿದರು. ಲೀಲಾವತಿಯು ಪ್ರಾಚೀನ ಭಾರತದ ಮಹಾನ್ ಗಣಿತಜ್ಞ. ಹೀಗೆ, ಪ್ರಾಚೀನ ಭಾರತೀಯ ಸಮಾಜವು ಸ್ತ್ರೀಯರಿಗೆ ಶಿಕ್ಷಣವನ್ನು ನೀಡಲು ಸಂಪ್ರದಾಯವಾಗಿರಲ್ಲಿಲ್ಲ ಮತ್ತು ಅವರಲ್ಲಿ ಅನೇಕರು ಕಲಿಕೆಯಲ್ಲಿ ಹೆಚ್ಚಿನ ಪ್ರಾವಿಣ್ಯತೆನ್ನು ಸಾಧಿಸಿದ್ದಾರೆ ಎಂಬುದನ್ನು ಗುರುತಿಸಬಹುದು. ಪ್ರಾಚೀನ

ಸ್ತ್ರೀಯರಿಗೆ ಶಿಕ್ಷಣದ ವಿಷಯದಲ್ಲಿ ಪುರುಷರೊಂದಿಗೆ ಸಮಾನ ಹಕ್ಕುಗಳಿದ್ದವು. ಆ ಕಾರಣವಾಗಿಯೇ ಈ ಕೆಳಕಂಡಂತೆ ದಾಖಲಿಸಿರುವ ಸ್ತ್ರೀಯರು ಅನೇಕ ಸೂತ್ರಗಳನ್ನು ರಚಿಸಿದ್ದಾರೆ. ಅವರುಗಳೆಂದರೆ;

ಋಗ್ವೇದದ ಪ್ರಥಮ ಮಂಡಲದ 126ನೆಯ ಸೂತ್ರದ ಏಳನೆಯ ಶ್ಲೋಕವನ್ನು ರಚಿಸಿದವಳು ರೋಮಾಸಾ ಎಂಬ ಬ್ರಹ್ಮವಾದಿ. ಅದೇ ಮಂಡಲದ 179ನೆಯ ಸೂತ್ರದಲ್ಲಿನ ಎರಡು ಶ್ಲೋಕಗಳು ಲೋಪಮುದ್ರೆಯಿಂದ ರಚಿತವಾದವುಗಳು. ಅದೇ ರೀತಿ ಐದನೆಯ ಮಂಡಲದ 28ನೆಯ ಮಂತ್ರವನ್ನು ವಿಶ್ವಧಾರಾ ಎಂಬುವಳು, ಎಂಟನೆಯ ಮಂಡಲದ 91ನೆಯ ಮಂತ್ರವನ್ನು ಅಪಾಲಾ ಎಂಬುವವಳೂ, ಹತ್ತನೆಯ ಮಂಡಲದ 79ನೆಯ ಮಂತ್ರವನ್ನು ಘೋಷಾಕಾಕ್ಷಿವತಿ ಎಂಬುವವಳೂ ರಚಿಸಿದ್ದಾರೆ. ಇದಲ್ಲದೆ ಹತ್ತನೆಯ ಮಂಡಲದಲ್ಲಿ ಶ್ರದ್ರಾ, ಕಾಮಾಯನೀ, ಯಮೀ, ದೈವಸ್ವತೀ, ಪಾಲೋತ, ಶಚಿ ಇವರೆಲ್ಲರೂ ಕೂಡ ಮಂತ್ರಗಳನ್ನು ರಚಿಸಿದ್ದಾರೆ. ಸಾಮವೇದದಲ್ಲಿ ಅಕೃಷ್ಟಭಾಷಾ, ಸಿಕ್ಕತ, ನೀವಾವರಿ, ಉತ್ತರಚ್ಚಿಕಾ ಗೌಪ್ಯಾಯನಾ ಇವರನ್ನು ಋಷಾಕಾ ಎಂದು ಕರೆದಿದೆ. ಶ್ರೀಆಳ್ತೆಕರರು ವೈದಿಕ ಯುಗದಲ್ಲಿ ಕೆಲವು ಯಜ್ಞಗಳನ್ನು ಸ್ತ್ರೀಯರಿಗಾಗಿಯೇ ಮೀಸಲಾಗಿರುತ್ತಿದ್ದವು. ಸೀತಾಯಜ್ಞ, ರುದ್ರಯಜ್ಞ, ರುದ್ರ ಬಲಿಗಳು, ಸೀತಾಯಜ್ಞವನ್ನು ಸ್ತ್ರೀಯರು ಸುಫಲ, ಸುಭಿಕ್ಷ ಧಾನ್ಯ ಸಂತಾನಾಭಿವೃದ್ಧಿಗಾಗಿ ಸುಗ್ಗಿಯ ಕಾಲದಲ್ಲಿ ಆಚರಿಸುತ್ತಿದ್ದರು. ರುದ್ರಯಜ್ಞದ ಮೂಲಕ ರುದ್ರನಲ್ಲಿ ತಮ್ಮ ಸೌಭಾಗವನ್ನು ಬೇಡುತ್ತಿದ್ದರು. ರುದ್ರ ಬಲಿ ಪಶುಗಳ ಯೋಗಕ್ಷೇಮಕ್ಕಾಗಿ ಆಚರಿಸಲ್ಪಡುತ್ತಿತ್ತು. ಪುರುಷ ಆಚರಿಸುವ ಸೋಮ ಯಜ್ಞದಲ್ಲಿ ಋಗ್ವೇದದ ಕಾಲದಲ್ಲಿ ಸ್ತ್ರೀಯೂ ಭಾಗವಹಿಸುತ್ತಿದ್ದಳು. ಶ್ಲೋಕಗಳನ್ನು ರಚಿಸಲು ಯಜ್ಞಯಾಗಾದಿಗಳನ್ನು ಮಾಡಲು ಅಧ್ಯಯನ ಮಾಡುವುದು ಅವಶ್ಯಕವಾಗುತ್ತಿತ್ತು. ಹೀಗೆ ಅಧ್ಯಯನ ಮಾಡುವ ಮಹಿಳೆಯರನ್ನು ಕ್ರಮೇಣವಾಗಿ ಎರಡು ವಿಧಗಳಾಗಿ ವಿಂಗಡಿಸಿದರು. ಒಂದು ಬ್ರಹ್ಮವಾದಿನಿಯರು ಎರಡು ಸದ್ಯೋಧ್ವಾಹರು ಎಂದು ಕರೆಯಲಾಗುತ್ತಿತ್ತು. ಬ್ರಹ್ಮವಾದಿನಿಯರು ನಿತ್ಯ ಬ್ರಹ್ಮಚಾರಿಣಿಯರು ಈ ಬ್ರಹ್ಮವಾದಿನಿಯರಿಗೆ ಅಗ್ನಿಯಜ್ಞಕ್ಕೆ ವೇದಾಧ್ಯಯನಕ್ಕೆ ಅವಕಾಶವಿತ್ತು. ವಟುಗಳಂತೆ ಹೊರಗೆ ಹೋಗಿ ಬಿಕ್ಷೆ ಎತ್ತದೆ ಮನೆಯಲ್ಲಿಯೇ ಸಂಬಂಧಿಕರಿಂದ ಭಿಕ್ಷೆ ಎನ್ನುವ ಶಾಸ್ತ್ರ ಮಾಡಬೇಕಿತ್ತು. ಇದಕ್ಕೆ ಉದಾಹರಣೆಯೆಂದರೆ, ಋಗ್ವೇದದಲ್ಲಿ ಉಲ್ಲೇಖವಾಗಿರುವ ಘೋಷಾ ಸೂರ್ಯ, ರೋಮಶಾ ಮಹಾಭಾರತದಲ್ಲಿಯ ಸುಲಭ, ರಾಮಾಯಣದಲ್ಲಿಯ ಶಬರಿ, ಉಪನಿಷತ್ತಿನಲ್ಲಿ ಉಲ್ಲೇಖವಾಗಿರುವ ಗಾರ್ಗಿ ಇವರು ಬ್ರಹ್ಮವಾದಿಯರು ಅಜೀವ ಬ್ರಹ್ಮಚಾರಿಣಿಯರಾಗಿದ್ದು ಇವರ ಗುರಿ ವಿದ್ಯಾಕ್ಷೇತ್ರದಲ್ಲಿ ಘನಪಾಂಡಿತ್ಯವನ್ನು ಪಡೆಯುವದಾಗಿತ್ತು. ವೇದಗಳ ಅಭ್ಯಾಸವಿಲ್ಲದೆ ಪೂರ್ವ ಮಿಮಾಂಸೆ ಅಭ್ಯಸಿಸಿ ಯಜ್ಞಯಾಗಾದಿಗಳನ್ನು ಕುರಿತು ಆಳವಾಗಿ ಅಭ್ಯಸಿಸುತ್ತಿದ್ದರು, ಇಂಥವರು ಬಹಿರಂಗವಾಗಿ ಬ್ರಹ್ಮಜ್ಞಾನ ಚರ್ಚೆಯಲ್ಲಿ ಭಾಗವಹಿಸುತ್ತಿದ್ದರು. ಒಟ್ಟಿನಲ್ಲಿ ವೈದಿಕ ಕಾಲದ ಸ್ತ್ರೀಯರಿಗೆ ವಿದ್ಯಾಕ್ಷೇತ್ರದಲ್ಲಿ ಹೆಚ್ಚಿನ ಸ್ವಾತಂತ್ರ್ಯವಿದ್ದು ಅವರು ಪುರುಷರಂತೆ ಉಪನಯನವನ್ನು ಮಾಡಿಸಿಕೊಂಡು ವೇದೋಪ ನಿಷತ್ತುಗಳನ್ನು ಅಧ್ಯಯನ ಮಾಡುತ್ತಿದ್ದರು. ಬಾಲಕಿಯರ ಉಪನಯನ ಅಥವಾ ವೇದ ಆರಂಭವೂ ಬಾಲಕರಂತೆಯೇ

ಸಾಮಾನ್ಯವಾಗಿರಬೇಕು. ವೈದಿಕ ಕಾಲದಲ್ಲಿ ಸ್ತ್ರೀಯರು ಸವಲತ್ತು ಪಡೆದ ಸ್ಥಾನವನ್ನು ಮಾತ್ರವಲ್ಲದೇ ಉನ್ನತ ಮಟ್ಟದ ನೈತಿಕತೆಯನ್ನು ಹೊಂದಿದ್ದರು. ಅವರು ಶಿಕ್ಷಣ ವ್ಯವಸ್ಥೆಗೆ ಧನಾತ್ಮಕ ಕೊಡುಗೆಯನ್ನು ನೀಡಿದ್ದಾರೆ. ಸಾಮಾನ್ಯ ಸಾಹಿತ್ಯ ಮತ್ತು ಸಾಂಸ್ಕೃತಿಕ ಶಿಕ್ಷಣವನ್ನು ಪಡೆಯುತ್ತಿದ್ದಂಥ ಸ್ತ್ರೀಯರ ಸಂಖ್ಯೆಯೂ ಸಾಕಷ್ಟು ಪ್ರಮಾಣದಲ್ಲಿ ದೊಡ್ಡದಾಗಿಯೇ ಇತ್ತು.

ಬಹುಕಾಲದವರೆವಿಗೂ ಕುಟುಂಬವು ಏಕೈಕ ಶಿಕ್ಷಣ ಕೇಂದ್ರ ಮತ್ತು ಸಂಸ್ಥೆಯೇ ಆಗಿತ್ತು. ಈ ಸಂಸ್ಥೆಯಲ್ಲಿ ಬಾಲಕರು ಸಹ ತಮ್ಮ ತಂದೆ ಮತ್ತು ಹಿರಿಯರಿಂದ ಮಾತ್ರ ಶಿಕ್ಷಣವನ್ನು ಪಡೆಯುತ್ತಿದ್ದರು. ಅದೇ ಸಹಜವಾಗಿ ಬಾಲಕಿಯರ ವಿಷಯವಾಗಿತ್ತು. ಆದರೆ, ಅನಂತರದ ಕಾಲಸಂದರ್ಭದಲ್ಲಿ ಸ್ತ್ರೀ ಶಿಕ್ಷಕರ ವರ್ಗವು ಅಸ್ಥಿತ್ವಕ್ಕೆ ಬಂದಿತ್ತು. 12ನೇ ಶತಮಾನದವರೆಗೆ ಈ ಭಾರತೀಯ ವೈದಿಕ ಸಮಾಜದಲ್ಲಿ ಯಾವುದೇ ರೀತಿಯ ಪೂರ್ದಾ ಪದ್ಧತಿಯೂ ಇರಲಿಲ್ಲ. ಆದ್ದರಿಂದ, ಶಿಕ್ಷಕ ವೃತ್ತಿಯಲ್ಲಿ ತೊಡಗಿಸಿಕೊಳ್ಳಲು ಯಾವುದೇ ತೊಂದರೆ ಇರಲಿಲ್ಲ. ಸ್ತ್ರೀ ಶಿಕ್ಷಕರು ಬಹುಶಃ ತಮ್ಮನ್ನು ವಿದ್ಯಾರ್ಥಿನಿಯರ ಬೋಧನೆಗೆ ಮಾತ್ರ ಸೀಮಿತಗೊಳಿಸಿಕೊಂಡಿರಬಹುದು. ಪಾಣಿನಿ ಮಹಿಳೆ – ವಿದ್ಯಾರ್ಥಿನಿಯರು, ಛತ್ರ ಶಾಲೆಗಳಿಗಾಗಿ ವಸತಿ ಗೃಹಗಳನ್ನು ಸೂಚಿಸುತ್ತದೆ. ಮತ್ತೇ, ಇವುಗಳು ಬಹುಶಃ ಸ್ತ್ರೀ ಶಿಕ್ಷಕರ ಉಸ್ತುವಾರಿಯಲ್ಲಿದ್ದವು ಎಂದೇ ಹೇಳಬಹುದು.

ಪ್ರಾಚೀನ ಭಾರತದಲ್ಲಿಯೂ ಸಹ ಶಿಕ್ಷಣವು ಸೌಮ್ಯ ರೂಪದಲ್ಲಿ ಪ್ರಚಲಿತದಲ್ಲಿತ್ತು. ಕೆಲವೊಮ್ಮೆ ಉನ್ನತ ಶಿಕ್ಷಣ ಪಡೆಯುವಾಗ ಬಾಲಕರು ಮತ್ತು ಬಾಲಕಿಯರು ಒಟ್ಟಿಗೆ ಶಿಕ್ಷಣವನ್ನು ಪಡೆಯುತ್ತಿದ್ದರು. ಕ್ರಿ.ಶ. 8ನೇ ಶತಮಾನದಲ್ಲಿ ಬರೆದ ಭವಭೂತಿಯ **ಮಾಲತಿ ಮಾಧವದಿಂದ,** ಸನ್ಯಾಸಿನಿ ಕಮಂಡಕಿಯು ಪ್ರಸಿದ್ಧ ಶಿಕ್ಷಣ ಕೇಂದ್ರದಲ್ಲಿ ಭೂರಿವಾಸು ಮತ್ತು ದೇವರತರೊಂದಿಗೆ ಶಿಕ್ಷಣವನ್ನು ಪಡೆದುಕೊಂಡಿದ್ದಾಳೆ ಎಂಬುದು ಅನೇಕ ಐತಿಹ್ಯಗಳಿಂದಲೂ ಕೂಡ ತಿಳಿದುಬರುತ್ತದೆ. ಉತ್ತರ – ರಾಮ ಚರಿತ್‌ನಲ್ಲಿ ಇದೇ ಲೇಖಕರು ಆತ್ರೇಯಿಯು ಕುಸಾ ಮತ್ತು ಲವರ ಜೊತೆಯಲ್ಲಿಯೇ ತನ್ನ ಶಿಕ್ಷಣ ಪಡೆಯುವುದನ್ನು ಗುರುತಿಸಬಹುದು.

ರಾಮಾಯಣ ಮತ್ತು ಮಹಾಭಾರತದ ಕಾಲದಲ್ಲಿ ಸ್ತ್ರೀಯರಿಗೆ ಇನ್ನು ಉಪನಯನ ಬ್ರಹ್ಮಚರ್ಯೆಯ ದೀಕ್ಷೆ ಕೊಡಲ್ಪಡುತ್ತಿದ್ದವು. ಅದರಲ್ಲಿ ಕೆಲವರು ವೇದಾಧ್ಯಯನ ಮಾಡಿದ್ದರೆಂಬುದಕ್ಕೆ ಕೌಶಲ್ಯ ಶಾಲೆಯರಿಗೆ ಮತ್ತೆ ವಿಕ ಎಂಬ ವಿಶೇಷಣವಿರುವುದರಿಂದಲೂ ಸೀತೆಯ ಸಂಧ್ಯಾವಂದನೆ ವಾಲಿಯ ಮಡದಿ ತಾರೆಯ ವೇದಸೂತ್ರ ಪಠಣಗಳ ವರ್ಣನೆಗಳನ್ನು ನೋಡಿದಾಗ; ಮೇಲ್ವರ್ಗದ ಸ್ತ್ರೀಯರಿಗೆ ಉಚ್ಚ ಶಿಕ್ಷಣವು ದೊರೆಯುತ್ತಿತ್ತೆನ್ನಬಹುದು. ಅದರಂತೆ ಮಹಾಭಾರತದ ಕಾಲದಲ್ಲಿ ಸ್ತ್ರೀಯರಿಗೆ ಉಚ್ಚ ಮಟ್ಟದ ಶಿಕ್ಷಣ ಸಿಗುತ್ತಿತ್ತು ಎಂದು ಸುಲಭಾ, ಆರುಂಧತಿ, ಗೌತಮಿ, ಕುಂತಿ, ದ್ರೌಪದಿ. ದಮಯಂತಿ, ಸಾವಿತ್ರಿಯಂಥವರೆಲ್ಲರೂ ವಿದ್ಯಾವತಿಯಾಗಿದ್ದರು. ವಿರಾಟರಾಯನ ಮಗಳು ಉತ್ತರ

ಬೃಹನ್ನಳೆಯಿಂದ ನೃತ್ಯ ಕಲಿತು ನೃತ್ಯ ವಿಷಾರದೆಯಾಗಿದ್ದರೆ, ಯಯಾತಿರಾಜನ ಮಗಳು ಮಾಧವಿ ಸಂಗೀತ ಸರಸ್ವತಿಯಾಗಿದ್ದಳು. ಬ್ರಾಹ್ಮಣಗಳ ಮತ್ತು ಉಪನಿಷತ್ತುಗಳ ಕಾಲದಲ್ಲಿ ಸ್ತ್ರೀಶಿಕ್ಷಣ ನಿಧಾನವಾಗಿ ಇಳಿಮುಖವಾಗತೊಡಗಿತು.

ಭಾರತದಲ್ಲಿ ಆರಂಭಿಕ ವೇದ ಕಾಲದಲ್ಲಿ ಸ್ತ್ರೀಯರಿಗೆ ಶಿಕ್ಷಣದ ನಿಖರವಾದ ಪ್ರಮಾಣವನ್ನು ನಿರ್ಧರಿಸುವುದು ಕಷ್ಟ ಸಾಧ್ಯವೇ ಆಗಿತ್ತು. ಬಾಲಕಿಯರಿಗೆ ಉಪನಯನ ಆಚರಣೆ ಕಡ್ಡಾಯವಾಗಿತ್ತು. ಮತ್ತೇ ಅದು ಎಲ್ಲಾ ಜನವರ್ಗದ ಬಾಲಕಿಯರಿಗೆ ನಿರ್ದಿಷ್ಟ ಪ್ರಮಾಣದ ವೇದ ಮತ್ತು ಸಾಹಿತ್ಯಿಕ ಶಿಕ್ಷಣ ನೀಡುವುದನ್ನು ಖಾತ್ರಿಪಡಿಸಬೇಕು. ಆದರೆ, ಪ್ರಾಥಮಿಕವಾಗಿ ಸ್ತ್ರೀಯರ ಧಾರ್ಮಿಕ ಸ್ಥಿತಿಯ ಕ್ಷೀಣತೆಯಿಂದಾಗಿ ಅನಂತರ ಬಹುದೊಡ್ಡ ಹಿನ್ನೆಡೆಯನ್ನೇ ಪಡೆಯಬೇಕಾಯಿತು.

ಧರ್ಮಸೂತ್ರಗಳ ಕಾಲಕ್ಕೆ ಬಂದಂತೆ ಎಲ್ಲ ಸಂಸ್ಕಾರಗಳು ಪುರುಷನಿಗೆ ಆಗಬೇಕು ಎಂದು ನಿರ್ಭಂಧನೆಗಳು ಪ್ರಾರಂಭವಾದವು. ಸಾಮವೇದಿ ಬ್ರಾಹ್ಮಣನಾಗಿದ್ದ ಸುಮತಿ ಭಾರ್ಗವನು ರಚಿಸಿರುವಂಥ ಮನುಧರ್ಮಶಾಸ್ತ್ರದ ಪ್ರಕಾರ; ಹಗಲು ರಾತ್ರಿ ಸ್ತ್ರೀಯರನ್ನು ಅವರ ಕುಟುಂಬದ ಪುರುಷರು ಅವಲಂಬಿಸಬೇಕಾಗಿರುತ್ತದೆ. ಅಂದರೆ, ಈಕೆಯೂ ಮಗುವಿದ್ದಾಗ ತಂದೆಯ ಆಶ್ರಯದಲ್ಲಿ, ಪ್ರೌಢಾವಸ್ಥೆಯಲ್ಲಿ ಗಂಡನ ಆಶ್ರಯದಲ್ಲಿ, ಮುಪ್ಪಿನಲ್ಲಿ ಮಕ್ಕಳ ಆಶ್ರಯದಲ್ಲಿಯೇ ರಕ್ಷಿಸುವುದರಿಂದ ಸ್ತ್ರೀಯೂ ಎಂದೂ ಕೂಡ ಸ್ವಾತಂತ್ರ್ಯಕ್ಕೆ ಅರ್ಹಳಲ್ಲವೆಂದು ಹೇಳಿರುತ್ತದೆ. ಆದರೆ, ಮನುವಿನ ಈ ನಿರ್ಬಂಧವು ಬಹುಕಾಲ ಮುಂದುವರೆಯಲಿಲ್ಲ. ಅನಂತರ ಪ್ರಚಾರಕ್ಕೆ ಬಂದ ಹೊಸ ಧರ್ಮಗಳು ಸ್ತ್ರೀಯರಿಗೆ ಮತ್ತೇ ಸ್ವಾತಂತ್ರ್ಯವನ್ನು ನೀಡಿ ಶೈಕ್ಷಣಿಕ ಅವಕಾಶಗಳು ದೊರೆತವು, ಬೌದ್ಧಧರ್ಮದ ಶಿಕ್ಷಣವನ್ನು ಪಡೆದುದಲ್ಲದೆ ಶೈಕ್ಷಣಿಕ ಸಂಸ್ಥೆಯಾಗಿದ್ದ ವಿಹಾರಗಳಲ್ಲಿಯು ಪ್ರವೇಶವನ್ನು ಪಡೆದರು. ಅದರ ಪ್ರಯೋಜನ ಪಡೆದು ಸಾಹಿತ್ಯದಲ್ಲಿ ತಮ್ಮ ಅಮೋಘ ಸೇವೆಯನ್ನು ಸಲ್ಲಿಸಿದ್ದಾರೆ. ಥೇರಿಯರ ಕಾವ್ಯ ಸಂಗ್ರಹವಾದ ಥೇರಿಗಾಥಾ ಹಲವು ಹತ್ತು ಜನ ಬೌದ್ಧಭಿಕ್ಷುಣಿಯರು ಕೃತಿಗಳ ಸಂಕಲನವಾಗಿದೆ. ಅನುಭೂತಿಯೇ ಕಾವ್ಯರೂಪವಾಗಿ ಪರಿಣಮಿಸಿದ ಈ ಸಂಕಲನ ಬೌದ್ಧಧರ್ಮದ ಪುನರ್ರುಜೀವನಕ್ಕಾಗಿ ಭಿಕ್ಷುಣಿಯರು ಅತ್ಯಂತ ಮಹತ್ವದ ಪಾತ್ರವನ್ನು ವಹಿಸಿದ್ದಾರೆ. ಎರಡು ಥೇರಿಗಾಥಾದಲ್ಲಿ ಅವರು ಸಾಧಿಸಿದ ಧಾರ್ಮಿಕ ಚೈತನ್ಯದ ಜೊತೆಗೆ ಅವರು ಅನುಭವಿಸಿದ ನಿರ್ವಾಣ ಸ್ಥಿತಿಯ ಸುಂದರ ಅನುಭಾವದ ನುಡಿಗಳು ದೊರೆಯುತ್ತವೆ. ಬೌದ್ಧಧರ್ಮದ ಕಾಲದಲ್ಲಿ ಪ್ರಸಿದ್ಧಿ ಪಡೆದ ಸ್ತ್ರೀಯರೆಂದರೆ; ಮಹಾಪ್ರಜಾಪತಿ ಗೌತಮಿ, ಕ್ಷೇಮಾ, ಪತಾಚಾರಾ, ನೇದಾಸಿ, ಅಮ್ರಾಪಾಲಿ, ಬೌದ್ಧಕುಂಡಂ, ಕೇಶಾ ಮೊದಲಾದ ಭಿಕ್ಷುಣಿಯರು. ಬೌದ್ಧ ವಿಹಾರಗಳಂತೆಯೇ ಜೈನ ಬಸದಿಗಳಲ್ಲಿಯೂ ಸ್ತ್ರೀಯರಿಗೆ ಪ್ರವೇಶವು ದೊರೆಯಿತು. ಮಹಾವೀರರು ಸ್ತ್ರೀಯರನ್ನು ಗೌರವದಿಂದ ಕಾಣಬೇಕೆಂದು ಹೇಳುತ್ತಿದ್ದುದರ ಫಲವಾಗಿ ಹಾಗೂ ಆತೋನ್ನತಿಗಾಗಿ ಶಿಕ್ಷಣದ ಸೌಕರ್ಯಗಳನ್ನು ಒದಗಿಸಿದ್ದರ ಪರಿಣಾಮವಾಗಿ ಮೂವತ್ತಾರು ಸಾವಿರ ಶ್ರಾವಿಕೆಯರು ಜೈನಧರ್ಮವನ್ನು ಪ್ರಸಾರ ಮಾಡಿದರೆಂಬ ಪ್ರತೀತಿಯಿದೆ. ಕನ್ನಡನಾಡಿನಲ್ಲಿಯು

ಅನೇಕ ಜೈನ ಮಹಿಳೆಯರು ಜೈನಧರ್ಮದ ತತ್ವಗಳನ್ನು ಆಚರಿಸಿ ಕೀರ್ತಿಶಾಲಿಗಳಾಗಿದ್ದಾರೆ. ಅಂಥವರಲ್ಲಿ ಪ್ರಮುಖರಾದವರೆಂದರೆ; ನಾಗರಖಂಡ ಎಪ್ಪತ್ತನ್ನಾಳುತ್ತಿದ್ದ ಜಕ್ಕಿಯಬ್ಬೆ, ಅತ್ತಿಮಬ್ಬೆ, ಶಾಂತಲೆಯಂಥವರು. ಅದರಂತೆ ಕೆಲವು ಧಾರ್ಮಿಕ ವಿದ್ಯಾಸಂಸ್ಥೆಗಳಲ್ಲಿ ವಿದ್ಯಾರ್ಥಿನಿಯರೂ ಇದ್ದ ಬಗೆಗೆ ಉಲ್ಲೇಖವಿದೆ. ರಾಜಕೇಶರಿವರ್ಮನ ಹದಿನಾಲ್ಕನೆಯ ವರ್ಷದ ಶಾಸನವು ವಿಡುಳ ಅಥವಾ ಆರಂದಿ ಮಂಗಲದ ಜೈನ ಬಸದಿಯಲ್ಲಿ ೫೦೦ ಜನ ವಿದ್ಯಾರ್ಥಿನಿಯರು, ಅಧ್ಯಯನ ಮಾಡುತ್ತಿದ್ದರೆಂದು ಉಲೇಖಿಸುತ್ತದೆ. ಕರ್ನಾಟಕದಲ್ಲಿ 12ನೇ ಶತಮಾನದಲ್ಲಿ ಬೆಳಗಿದ ಜೈನ ಸಾಧಕಿಯರ ವಿಷಯವನ್ನು ಡಾ.ಎಂ.ಚಿದಾನಂದಮೂರ್ತಿ ಅವರು ಇಂತು ತಿಳಿಸುತ್ತಾರೆ. ಕಠೋರ ತಪಸ್ಸಾಧನೆಗಳಲ್ಲಿ ಮುಂದುವರೆದು ಖ್ಯಾತರಾದವರು ಪ್ರಭಾವತಿದೇವಿ ಕಂತಿ, ರಾತ್ರಿಮತಿಕಂತಿ, ಶಶಿಮತಿಕಂತಿ ಮತ್ತು ಶ್ರೀಮತಿಕಂತಿ, ಶ್ರೀಮತಿಕಂತಿಯವರು ಸಮಾಧಿ ಮರಣದಂಥ ಕಠೋರ ವ್ರತ ಸಾಧನೆಮಾಡಿ ಕೀರ್ತಿಶಾಲಿಗಳಾದರು.

ಪಂಪನ ಆದಿಪುರಾಣದಲ್ಲಿ ಒಂದು ದಿನ ವೃಷಭ ಸ್ವಾಮಿಯು ತನ್ನ ಇಬ್ಬರು ಹೆಣ್ಣು ಮಕ್ಕಳಿಗೆ ಶಿಕ್ಷಣವನ್ನು ನೀಡಬೇಕೆಂದು ಅವರಿಬ್ಬರಗೂ ಬ್ರಾಹ್ಮಣೆ ಸಿದ್ಧಂ ನಮಃ ಎಂದು ಸೌಂದರಿಗೆ ಗಣಿತವನ್ನು ಬರೆದು ತೋರಿಸಿ ಸ್ವಯಂಭುವಾಭಿದಾನ ಪದ ವಿದ್ಯೆಗಳನ್ನು ಭೋದಿಸಿ ವಿದ್ಯಾಪರಿಪೂರ್ಣೆಯರನ್ನು ಮಾಡಿದನು. ಹಿಂದಿನ ಕಾಲದಲ್ಲಿ ಮಹಿಳೆಯ ಶಿಕ್ಷಣವು ಮನೆಯಲ್ಲಿಯೇ ನಡೆಯುತ್ತಿತ್ತು ಎಂದು ಸ್ಪಷ್ಟವಾಗುತ್ತದೆ. ಇನ್ನು ಕೆಲವರು ಮನೆಯಿಂದ ದೂರ ಹೋಗಿ ಋಷಿಗಳ ಹತ್ತಿರ ಅಧ್ಯಯನ ಮಾಡುತ್ತಿದ್ದರು. ಭವಭೂತಿಯ ಉತ್ತರರಾಮ ಚರಿತ್ರೆ ಎಂಬ ಕೃತಿಯಲ್ಲಿಯ ಅತೀಯ ವಾಲ್ಮೀಕಿ ಋಷಿಗಳ ಹತ್ತಿರ ಅಧ್ಯಯನ ಮಾಡುತ್ತಿದ್ದಳು. ಭವಭೂತಿಯ ಇನ್ನೊಂದು ನಾಟಕ ಮಾಲತಿ ಮಾಧವದಲ್ಲಿಯ ಬೌದ್ಧ ಸನ್ಯಾಸಿಯಾದಂಥ ಕಾಮಂದತಿ ಭೂರಿವಸು ದೇವದಾತರ ಸಹಪಾಠಿಯಾಗಿದ್ದಳು. ಶಬರಿಯು ಮಾತಂಗ ಮಹರ್ಷಿಯ ಶಿಷ್ಯೆಯಾಗಿದ್ದು, ಅವರ ಆಶ್ರಮದಲ್ಲಿಯೇ ಓದಿದಳು. ಅದರಂತೆಯೇ ಶಾಂತಿನಾಥನ ಸುಕುಮಾರ ಚರಿತ್ರೆಯಲ್ಲಿ ನಾಗಶ್ರೀ ಎಂಬುವವಳು ಪ್ರಸಿದ್ಧ ವಿದ್ವಾಂಸಳಾಗಿದ್ದಳೆಂದು ಹೇಳಲಾಗಿದೆ. ಇನ್ನೂ ಕೆಲವು ಧಾರ್ಮಿಕ ಕೇಂದ್ರಗಳಲ್ಲಿ ಸ್ತ್ರೀಯರು ವ್ಯಾಸಂಗ ಮಾಡಿದಂತೆ ತೋರುತ್ತದೆ. ರಾಜಕೇಸರಿವರ್ಮನ ಹದಿನಾಲ್ಕನೆಯ ವರ್ಷದ ಶಾಸನವು ವಿಡಾಳ ಅಥವಾ ಆರಂದಿಮಂಗಲದ ಜೈನಬಸದಿಯಲ್ಲಿ ೫೦೦ ವಿದ್ಯಾರ್ಥಿನಿಯರು ಅಧ್ಯಯನ ಮಾಡುತ್ತಿದ್ದರೆಂದು ಹೇಳುತ್ತದೆ.

ಇದೇ ರೀತಿ ಕರ್ನಾಟಕದಲ್ಲಿಯು ಜೈನ ಸನ್ಯಾಸಿನಿಯರು ಒಂದೇ ಬಸದಿಯಲ್ಲಿ ವಾಸಿಸಿ ವ್ಯಾಸಂಗ ಮಾಡುತ್ತಿದ್ದಕ್ಕೆ ಅನೇಕ ಉದಾಹರಣೆಗಳಿವೆ. ಗೊರವೂರ ಬಸದಿ – ಮುವಾರದ ಬಸದಿ ಸೊರಟೂರದ ಬಲದೇವ ಜಿನಾಲಯ ಕುಯಿಬಾಳದ ಬಸದಿ ಪುಲಿಗೇರೆಯ ಆನೆಸಜ್ಜೆ ಬಸದಿ. ಮುಂತಾದೆಡೆಗಳಲ್ಲಿ ಜೈನಸನ್ಯಾಸಿನಿಯರು ವ್ಯಾಸಂಗಕ್ಕಾಗಿ ಬಸದಿಗಳಲ್ಲಿ ವಾಸಿಸುತ್ತಿದ್ದರು. ಆದರೆ

ಯಾವುದೇ ಅಗ್ರಹಾರ, ಜೈನ ಮತ್ತು ಬೌದ್ಧ ಯುಗದ ತರುವಾಯದ ಸ್ತ್ರೀಜೀವನದ ಮೇಲೆ ಕಟ್ಟುನಿಟ್ಟುಗಳನ್ನು ಹೆಚ್ಚು ಬಿಗಿಯಾಗಿ ಸಂಕುಚಿತವಾಗ ತೊಡಗಿದವು. ಇದರಿಂದ ಸ್ತ್ರೀ ಶಿಕ್ಷಣಕ್ಕೆ ಕಡಿವಾಣಗಳು ಹೆಚ್ಚಾದವು.

ಶಾಸನಗಳಲ್ಲಿ ಸಾಮಾನ್ಯವಾಗಿ ರಾಜಮನೆತನಗಳ ಮಹಿಳೆಯರ, ದಂಡನಾಯಕರ ಮಡದಿಯರ ಸಾಮಂತರ ಮಡದಿಯರು, ಮಂತ್ರಿಗಳ ಹಾಗು ಇತರೆ ಮೇಲವರ್ಗಕ್ಕೆ ಸೇರಿದ ಸ್ತ್ರೀಯರ ವಿಷಯವಾಗಿ ತಿಳಿದು ಬರುವದೇ ಹೆಚ್ಚು, ಆಲ್ಲೊಮ್ಮೆ ಇಲ್ಲೊಮ್ಮೆ ಸಾಮಾನ್ಯ ಮಹಿಳೆಯರ ವಿಷಯವು ದೊರೆಯುತ್ತದೆ. ಕರ್ನಾಟಕದ ಶಾಸನಗಳಲ್ಲಿ ವಿದ್ಯಾವಂತ ಸ್ತ್ರೀಯರ ಉಲ್ಲೇಖಗಳು ವಿರಳ. ಆದರೆ ರಾಜ ಮನೆತನಗಳ ಅಥವಾ ಅಧಿಕಾರಿಗಳ ಸ್ತ್ರೀಯರಿಗೆ ಶಿಕ್ಷಣ ಮಿಸಲಾಗಿರುವಂತೆ ಕಾಣುತ್ತದೆ. ರಾಜಮನೆತನದ ಮಹಿಳೆಯರು ಆಡಳತಕ್ಕೆ ಸಂಬಂಧಿಸಿದ ವಿಷಯವನ್ನು ತಿಳಿದುಕೊಂಡು ಕೆಲವು ಭಾಗಗಳಲ್ಲಿ ಆಡಳಿತವನ್ನು ನಡೆಸುತ್ತಿದ್ದರೆಂಬುವದಕ್ಕೆ ಶಾಸನಗಳ ಅಧಾರಗಳುಂಟು,

ರಾಜಮನೆತನಗಳ ಮಹಿಳೆರಿಗೆ ವಿದ್ಯೆಯು ರಾಜಕುಮಾರರಿಗೆ ದೊರೆಯಬಹುದಾದ ಮಟ್ಟದಲ್ಲಿ ದೊರಕುತ್ತಿರಲಿಲ್ಲ. ಬೇಕಿದ್ದರೆ ಸಂಗೀತ ಮತ್ತು ನೃತ್ಯಗಳಂಥ ಕಲೆಯ ತರಬೇತಿಯು ಅವಳಿಗೆ ದೊರೆಯುತ್ತಿದ್ದಂತೆ ಕಾಣುತ್ತದೆ. ತಮ್ಮ ರಾಜರ ಮನಸೆಳೆಯುವದಕ್ಕಾಗಿ ಇವುಗಳನ್ನು ಕಲಿಯುತ್ತಿರಬಹುದು. ಈ ವಿಷಯವಾಗಿ ನೇರವಾದ ಉಲ್ಲೇಖಗಳಲ್ಲದಿದ್ದರೂ, ಪ್ರಾಚೀನ ಕರ್ನಾಟಕದ ರಾಣಿಯರು ಹೊಂದಿರುವ ಬಿರುದು ವಿಶೇಷಣಗಳಿಂದ ತಿಳಿಯಬಹುದಾಗಿದೆ. ಇದಕ್ಕೆ ಸಾಕ್ಷೀಕರಿಸಿರುವಂತೆಯೇ; ಅರಮನೆಯಲ್ಲಿ ಬಹುದೊಡ್ಡ ಸ್ತ್ರೀಯರ ಪಡೆಯೇ ಅಸ್ಥಿತ್ವದಲ್ಲಿತ್ತು ಎಂಬುದು ದೃಢಪಟ್ಟಿರುತ್ತದೆ ಮತ್ತು ಅವರ ಮನೆತನಗಳು ರಾಜಮನೆತನದ ಬಳಿ ಇದ್ದವು. ಓದುವ ತಿರುಮಲಮ್ಮ ಅಥವಾ ತಿರುಮಲಾಂಬಿಕಾ ಅವರು ಅರಮನೆಯಲ್ಲಿ ಶಾಸ್ತ್ರೀಯ ಮತ್ತು ಪವಿತ್ರ ಗ್ರಂಥಗಳನ್ನು ಅಧ್ಯಯನ ಮಾಡುತ್ತಿದ್ದರು. ಆದ್ದರಿಂದಲೇ ಅವರು ಸಂಸ್ಕೃತದ್ಲಿ ಕಾವ್ಯ ರಚಿಸುವುದರಲ್ಲಿಯೂ ನಿಪುಣರಾಗಿದ್ದರು. ಈ ಪ್ರತಿಭೆಗಳಿಂದಾಗಿ ಅವರು ಅಚ್ಯುತರಾಯ ರಾಜನಿಂದ ಮೆಚ್ಚುಗೆಯನ್ನು ಗಳಿಸಿದ್ದಳು. ವಿವಿದ ಶಾಸ್ತ್ರಗಳು, ಸಾಹಿತ್ಯ, ನಾಟಕ ಮತ್ತು ಸಂಗೀತದಲ್ಲಿ ಸಾಧನೆ ಮಾಡಿದ ಮಹಿಳೆಯರೂ ಇದ್ದರು ಎಂದು ಹೇಳಬಹುದು. ಈ ರೀತಿಯ ಶಿಕ್ಷಣವು ಉತ್ತಮ ವಿದ್ವಾಂಸರು ಮತ್ತು ಆಡಳಿತಗಾರರಾದ ಬಹುಮುಖ ರಾಣಿಯರನ್ನು ಸೃಷ್ಟಿಸುರುತ್ತದೆ ಎಂದು ಹೇಳಬಹುದು.

ಕರ್ನಾಟಕ ರಾಜ್ಯದ ಕೋಲಾರ ಜಿಲ್ಲೆಯ ವೀರಗಲ್ಲು ಸವಿನಿರ್ಮಡಿ ಎಂಬ ವಿದ್ಯಾವಂತ ಬಾಲಕಿಯನ್ನು ಚಿತ್ರಿಸಿರುತ್ತದೆ. ಈಕೆಯೂ ಎಲ್ಲಾ ಶಾಸ್ತ್ರಗಳನ್ನು ಬಲುಚೆನ್ನಾಗಿಯೇ ತಿಳಿದಿದ್ದಳು. ಮೈಸೂರು ಅರಮನೆಯಲ್ಲಿರುವ ಚೀಟಿ ಸರ್ವರಾದ ಸಂಚಿಯ ಹೊನ್ನಮ್ಮ ರಾಜಸ್ಥಾನದ ವಿದ್ವಾಂಸ ರಾಜಗುರು ಅಲಹಿಯ ಸಿಂಗರಾಯರ ಅಡಿಯಲ್ಲ ಅಧ್ಯಯನ ಮಾಡಲು ರಾಯಧನದಿಂದ ಎಲ್ಲ

ಪ್ರೋತ್ಸಾಹವನ್ನು ಪಡೆದಿದ್ದರು ಎಂಬುದನ್ನು ದಾಖಲಿಸಿರುತ್ತದೆ. ಸ್ವ – ಅಧ್ಯಯನವು ತರಗತಿಯ ಬೋಧನೆಗೆ ಹಾಜರಾಗುವಷ್ಟೇ ಮುಖ್ಯವಾಗಿತ್ತು. ಕಂಠಪಾಠ, ಸಂತನೋತ್ಪತ್ತಿ ಮತ್ತು ಸರಿಯಾದ ಉಚ್ಛಾರಣೆಯ ಮೇಲೆ ಒತ್ತಡ ಹಾಕಲಾಯಿತು. ಕರ್ನಾಟಕದ ಹಲವು ಹತ್ತು ಸ್ಥಳಗಳಲ್ಲಿರುವಂಥ ವರ್ಣಚಿತ್ರಗಳು ಬಾಲಕಿಯರು ಅಧ್ಯಯನ ಮಾಡುವ, ಓದುವ, ಬರೆಯುವ ಕಾಯಕದಲ್ಲಿ ಮುಳುಗಿರುವಂತೆಯೇ ಚಿತ್ರಿಸಲಾಗಿದೆ. ಇವುಗಳಲ್ಲೆವೂ ಕೂಡ ಭಾರತ ಮತ್ತು ಕರ್ನಾಟಕ ರಾಜ್ಯದ ಸಂದರ್ಭದಲ್ಲಿ ಸ್ತ್ರೀಯರ ಶಿಕ್ಷಣದ ಕುರುಹುಗಳೇ ಹಾಗೂ ಐತಿಹ್ಯಗಳೇ ಆಗಿರುತ್ತವೆ ಎಂದು ಹೇಳಬಹದು.

ಒಟ್ಟಾರೆಯಾಗಿ, ಪ್ರಾಚೀನ ಭಾರತದಲ್ಲಿ ಅಸಮಾನ ಮನಸ್ಸಿನ ಸುಮತಿ ಭಾರ್ಗವನು ರಚಿಸಿರುವಂಥ ಮನುಧರ್ಮಶಾಸ್ತ್ರವನ್ನು ಹೊರತು ಪಡಿಸಿ, ಉಳಿದಂತೆ ಯಾವುದೇ ವೇದಗಳು ಸ್ತ್ರೀಯರ ಶಿಕ್ಷಣಕ್ಕೆ ಅಡ್ಡಿಯನ್ನು ಪಡಿಸಿರುವುದಿಲ್ಲ ಎಂಬುದನ್ನು ಪ್ರಸ್ತುತ ಅಧ್ಯಯದಿಂದ ಗುರುತಿಸಲಾಗಿದೆ. ಪ್ರಾಚೀನತೆಯ ಸ್ತ್ರೀಯರ ಶಿಕ್ಷಣವನ್ನು ಆಧರಿಸಿಯೇ ಆಧುನಿಕತೆಯ ಕಾಲದಲ್ಲಿಯೂ ಸ್ತ್ರೀಯರ ಶಿಕ್ಷಣಕ್ಕೆ ಪೂರಕ ಹಾಗೂ ಹೆಚ್ಚಿನ ಕಾರ್ಯಕ್ರಮಗಳನ್ನು ಆಳುವ ಸರ್ಕಾರಗಳು ರೂಪಿಸಿ ಜಾರಿಗೆ ತಂದಿರುವುದನ್ನು ಗುರುತಿಸಬಹುದು.

**ಆಧಾರ ಗ್ರಂಥಗಳು**


1. Epigraphica Carnatika, Mysore
2. Annual reports on South Indian Epigraphy
3. ಎಲಿಗಾರ ಚೆನ್ನಕ್ಕ,–**ಶಾಸನಗಳಲ್ಲಿ ಕರ್ನಾಟಕದ ಸ್ತ್ರೀ ಸಮಾಜ**, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
4. ಕಾಮಾತ ಜೋತ್ಸ್ನಾ,– **ಕರ್ನಾಟಕದ ಶಿಕ್ಷಣ ಪರಂಪರೆ**, ಮುಂಬಯಿ
5. ಮರಿದೇವರು. ಎಚ್.ಸಿ, –**ಶಿಕ್ಷಣ ತತ್ವಶಾಸ್ತ್ರ**, ತುಮಕೂರು.
6. ದಿಕ್ಷೀತ್ ಜಿ.ಎಸ್, –**ಪ್ರಾಚೀನ ಕರ್ನಾಟಕದ ಶಿಕ್ಷಣ ಕ್ರಮ**, ಕ.ವಿ,ವಿ. ಧಾರವಾಡ.